ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಠತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

50 GOLDEN JUBILEE 1964-2014 JSS COLLEGE OF ARTS, COMMERCE & SCIENCE OOTY ROAD, MYSORE

1916 H.H. Jagadguru Dr. Sri Shivarathri Rajendra Mahaswamiji 2015 Centenary Celebrations

☎ 0821-2548236 & 2548380 Fax: 0821-2548238 E-mail: jssautonomous@gmail.com

**ದಿನಾಂಕ : 13.08.2016**

ಪ್ರಕಟಣೆಯ ಕೃಪೆಗಾಗಿ

## ಲೋಕಚಿಂತನೆ ಮತ್ತು ಆತ್ಮನಿವೇದನೆಯ ಬದುಕು ಪೂಜ್ಯ ರಾಜೇಂದ್ರಶ್ರೀಗಳವರದು

– ಡಾ. ಗೊ.ರು. ಚನ್ನಬಸಪ್ಪನವರು

"ಆತ್ಮಶುದ್ಧಿಯಿಂದ ಮಾತ್ರ ಆತ್ಮವಿಶ್ವಾಸ ಸಾಧ್ಯ, ಶರಣರ ಬದುಕು ಅಂತಹ ಆತ್ಮವಿಶ್ವಾಸದಿಂದ ಕೂಡಿರುವಂಥದ್ದು. ಈ ಸೂತ್ರವನ್ನು ಅಳವಡಿಸಿಕೊಂಡು, ಆತ್ಮ ನಿವೇದನೆಯ ಜೊತೆಗೆ ಲೋಕ ಚಿಂತನೆಯಲ್ಲಿ ಆಧ್ಯಾತ್ಮಿಕ ಬದುಕನ್ನು ಸಾಗಿಸಿದ ಮಹಾಶರಣರು ಪೂಜ್ಯ ರಾಜೇಂದ್ರ ಶ್ರೀಗಳು" ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಗೊ.ರು. ಚನ್ನಬಸಪ್ಪನವರು ಹೇಳಿದರು.

ಶ್ರೀಯುತರು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮಶತಮಾನೋತ್ಸವ ಸಮಾರಂಭದಲ್ಲಿ ನುಡಿನಮನ ಸಲ್ಲಿಸಿ ಮಾತನಾಡಿದರು. ಅವರು 'ಪೂಜ್ಯ ರಾಜೇಂದ್ರಶ್ರೀಗಳ ಪ್ರಥಮ ಆದ್ಯತೆ ಶಿಕ್ಷಣವಾಗಿತ್ತು. ಕರ್ನಾಟಕದ ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ವಿಶೇಷವಾದ ಕೊಡುಗೆಯನ್ನು ಪೂಜ್ಯರು ನೀಡಿದ್ದಾರೆ. ಅದು ಇಂದಿನ ಶ್ರೀಗಳ ದೂರದೃಷ್ಟಿ ಮತ್ತು ಕಾಯಕನಿಷ್ಠೆಯಿಂದ ನಾಡಿನ ಗಡಿಮೀರಿ ಬೆಳೆದಿದೆ. ಮಠಗಳು ಕೇವಲ ಪೂಜಾ ಕ್ಷೇತ್ರಗಳಲ್ಲ. ಅವು ಸಮಾಜದ ಪ್ರಗತಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ಮೂಲಕ ಬಸವಾದಿ ಶರಣರ ಚಿಂತನೆಯ ನೆಲೆಯಲ್ಲಿ ಸಾಗಬೇಕಿದೆ. ಪೂಜ್ಯ ರಾಜೇಂದ್ರ ಶ್ರೀಗಳವರ ಕನಸು ಇದು. ಅಂತೆಯೇ ಬಡವರ ಉದ್ಧಾರಕ್ಕಾಗಿ ಬದುಕಿದವರು. ಆ ಕಾರಣದಿಂದಲೇ ರಾಜೇಂದ್ರ ಶ್ರೀಗಳು ಪ್ರತಿಯೊಬ್ಬ ಭಕ್ತರ ಹೃದಯದಲ್ಲಿ ನೆಲೆಸಿದ್ದಾರೆ' ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ವಿಜಯಪುರ ಬಿಎಲ್‌ಡಿಇ ಸಂಸ್ಥೆಯ ವಿಶೇಷ ಸಲಹೆಗಾರರಾದ ಪ್ರೊ. ಬಿ.ಜಿ. ಮೂಲಿಮನಿಯವರು '21ನೇ ಶತಮಾನವನ್ನು ಜ್ಞಾನದ ಯುಗವೆಂದು ಕರೆಯಲಾಗಿದೆ. ಆದರೆ ಸೃಜನಶೀಲತೆಯ ಕೊರತೆಯಿಂದ ಜ್ಞಾನದ ಸೃಷ್ಟಿ ಸರಿಯಾಗಿ ಆಗುತ್ತಿಲ್ಲ. ಆದರೆ ಪೂಜ್ಯ ರಾಜೇಂದ್ರ ಶ್ರೀಗಳು ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳಿಂದ ಕೂಡಿದ ಗುಣಮಟ್ಟದ ಶಿಕ್ಷಣವನ್ನು ನೀಡಲು ಇಂತಹ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ, ಜ್ಞಾನದ ದೀವಿಗೆಯನ್ನು ಮನೆಮನೆಗೂ ತಲುಪಿಸಿದ ಮಹಾಬೆಳಕಾಗಿದ್ದಾರೆ. ಉದಾತ್ತ ಧ್ಯೇಯಗಳತ್ತ ಶಿಕ್ಷಣ ಎಂಬ ನೆಲೆಯಲ್ಲಿ ಜೆಎಸ್‌ಎಸ್ ಸಂಸ್ಥೆಯು ಉನ್ನತ ಶಿಕ್ಷಣಕ್ಕೆ ಹೆಚ್ಚು ಕಾಳಜಿ ವಹಿಸಿ, ಮಾನವತೆಯ ತಳಹದಿಯ ಮೇಲೆ ಸಮಾಜವನ್ನು ಕಟ್ಟಲು ಸೇವಾನಿರತವಾಗಿದೆ' ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಸಮ್ಮುಖ ವಹಿಸಿದ್ದ ಕಲಬುರಗಿಯ ಸುಲಫಲ ಮಠ ಮತ್ತು ಸಾರಂಗ ಮಠದ ಜಗದ್ಗುರು ಡಾ. ಶ್ರೀ ಸಾರಂಗಧರ ದೇಶಿಕೇಂದ್ರ ಮಹಾಸ್ವಾಮಿಗಳು ಆಶೀರ್ವಚನ ನೀಡುತ್ತಾ "ರಾಜೇಂದ್ರ ಶ್ರೀಗಳು ದೇವರನ್ನು ಅನಾಥ ಮಕ್ಕಳಲ್ಲಿ, ಬಡವರಲ್ಲಿ ದೀನದಲಿತರಲ್ಲಿ ಕಂಡವರು. ಅವರಿಗಾಗಿ ತಾವು ಕಷ್ಟ ಅನುಭವಿಸಿದರೂ ಶಿಕ್ಷಣ ಸಂಸ್ಥೆಗಳನ್ನು, ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. ಆ ಕಾರಣದಿಂದಲೇ ಅವರು ಭಕ್ತರ ಹೃದಯ ಪಲ್ಲಕ್ಕಿಯಲ್ಲಿ ಕುಳಿತಿದ್ದಾರೆ." ಎಂದು ಹೇಳಿದರು.

.....೨